

# ಆಹಾ... ನಿಹಾ!

# ಮನುಕುಲದ ಕಥೆ ಪಿಸುಗುಡುವ ಗುಹೆಗಳು




**ನಲವತ್ತು ಸಾವಿರ ವರ್ಷಗಳ ಇತಿಹಾಸವನ್ನು ಹೊಂದಿರುವ ಈ ಗುಹೆಗಳಲ್ಲಿ, ಸಾವಿರಾರು ವರ್ಷಗಳ ಹಿಂದಿನ ಅಸ್ಥಿಪಂಜರ ಪತ್ತೆಯಾಗಿದೆ. ಶಿಲಾಯುಗದ ಮನುಷ್ಯನ ಕುರುಹುಗಳು ಏಷ್ಯಾಖಂಡದಲ್ಲಿ ಮೊದಲು ಪತ್ತೆಯಾಗಿರುವುದು ಈ ಗುಹೆಗಳಲ್ಲಿ.**

**■ ಪಾಂಡುರಂಗ ಹೆಗಡೆ**

ಮಲೇಷ್ಯಾದ ಸರಾವಾಕ ದ್ವೀಪದಲ್ಲಿನ ಮಿರಿ ಎನ್ನುವ ಪಟ್ಟಣ ಪಾಮ್ ಎಣ್ಣೆ ಹಾಗೂ ನಾಟಾದ ಉದ್ಯಮಕ್ಕೆ ಪ್ರಸಿದ್ಧ. ವಿಶ್ವಪ್ರಸಿದ್ಧ ನಿಹಾ ಗುಹೆಗಳಿಗೆ ಸಮೀಪದಲ್ಲಿರುವ ಕಾರಣದಿಂದಲೂ ಮಿರಿ ಪ್ರಸಿದ್ಧವಾಗಿದೆ. ಮಿರಿಯಿಂದ ನಿಹಾ ಗುಹೆಗಳಿಗೆ 110 ಕಿ.ಮೀ. ದೂರದ ಹಾದಿ.

ಮಿರಿ ಪುಟ್ಟ ಪಟ್ಟಣ. ಅಲ್ಲಿಂದ ನಿಹಾ ಗುಹೆಗಳನ್ನು ತಲುಪಲು ಯಾವ ರೀತಿಯ ಸಾರ್ವಜನಿಕ ವಾಹನ ಸೌಕರ್ಯವೂ ಇಲ್ಲ. ಒಂಟಿ ಪಯಣಿಗನಾಗಿ, 110 ಕಿ.ಮೀ. ದೂರದ ಪಯಣಕ್ಕೆ ಟ್ಯಾಕ್ಸಿಯಲ್ಲಿ ಹೋಗುವುದು ಪ್ರವಾಸಿಗರಿಗೆ ಹೊರೆಯೇ ಸರಿ. ಹುಡುಕಾಟದ ನಂತರ ಗುಹೆಗಳ ಹತ್ತಿರ ಹಾದುಹೋಗುವ ಹೆದ್ದಾರಿಯಲ್ಲಿ ಸಂಚರಿಸುವ ಬಸ್ ಬಗ್ಗೆ ಮಾಹಿತಿ ತಿಳಿಯಿತು. ಅಂತೂ ನಿಹಾ ಜಂಕ್ಷನ್ ತಲುಪಿದೆ. ಅದೊಂದು ಚಿಕ್ಕ ಹಳ್ಳಿ. ಅಲ್ಲಿಂದ 15 ಕಿ.ಮೀ. ದೂರದ ಗುಹೆಗಳ ಪ್ರದೇಶ ತಲುಪಲು ಟ್ಯಾಕ್ಸಿಯ ಮೊರೆ ಹೋಗಬೇಕಾಯಿತು.

ದಾರಿಯಲ್ಲಿ ಎಲ್ಲಿ ನೋಡಿದರೂ ಹಸಿರು ವನರಾಶಿ. ಆದರೆ ಅದು ನೈಸರ್ಗಿಕ ಕಾಡಲ್ಲ, ಅಲ್ಲಿರುವುದು ಮಾನವ ನಿರ್ಮಿತ ಪಾಮ್ ನೆಡುತೋಪುಗಳು. ದೂರದಲ್ಲಿ ನಮ್ಮ ಮಲೆನಾಡಿನ ಹಾಗೆ ಗುಡ್ಡಗಾಡು ಪ್ರದೇಶದ ದರ್ಶನ. ದಾರಿ ಸವೆದದ್ದೇ ತಿಳಿಯದಂತೆ, ನಾವು ನಿಹಾ ರಾಷ್ಟ್ರೀಯ ಉದ್ಯಾನದ ಪ್ರವೇಶದ್ವಾರ ತಲುಪಿದೆವು. ಟ್ಯಾಕ್ಸಿ ಚಾಲಕ ಚೋ ‘ಇಲ್ಲಿಂದ ನೀವು 3 ಕಿ.ಮೀ. ನಡೆದುಕೊಂಡು ಹೋಗಬೇಕು, ಗುಹೆಗಳನ್ನು ನೋಡಿ ಬರಲು ಕಡಿಮೆಯೆಂದರೂ ನಾಲ್ಕು ತಾಸು ಬೇಕು’ ಎಂದ. ಮರಳಿ ಹೋಗಲು ಚೋನಿಗೆ ನಾಲ್ಕು ತಾಸಿನ ನಂತರ ಬರುವಂತೆ ಹೇಳಿದೆ.

ನಿಹಾ ಗುಹೆಗಳ ಪರಿಸರದಲ್ಲಿ ಸಿಂಗಾಯಿ ಎನ್ನುವ ನದಿಯಿದೆ. ಚಿಕ್ಕ ದೋಣಿಯನ್ನು ಹತ್ತಿ ನದಿಯನ್ನು ದಾಟುವುದು ವಿಭಿನ್ನ ಅನುಭವ ನೀಡುತ್ತದೆ. ಸುತ್ತಲೂ ಗಗನಚುಂಬಿ ಮರಗಳು, ನದಿ ಚಿಕ್ಕದಾದರೂ ಅದರ ಕೆಂಪುನೀರಿನಲ್ಲಿ ಮೊಸಳೆಗಳಿರುವ ಎಚ್ಚರಿಕೆಯ ಫಲಕಗಳು ಹಾಕಲಾಗಿತ್ತು. ನದಿ ದಾಟಿದ ನಂತರ ಕಾಲು ದಾರಿ ಆರಂಭ. ಅಚ್ಚುಕಟ್ಟಾದ ನಿರ್ಜನವಾಗಿರುವ ಕಾಲುಹಾದಿ.